(c) The annual expenditure towards these facilities are as follows.—

For the years	1979-80	...	Rs. 22,849-80
	1980-81	...	Rs. 25,690-10
	1981-82 (upto 31-12-81)	...	Rs. 13,927-51

In addition to the above annual expenditure, the State Insurance Corporation is providing facilities like tax, medical and accident facilities etc. The entire expenditure on this occount is met by the State Insurance Corporation.

ಅಧ್ಯಕ್ಷರು.—(೩) ಪ್ರಶ್ನೆಯ ಉತ್ತರದಲ್ಲಿ ಹೆರಿಗೆ ಬದಲು ತೆರಿಗೆ ಎಂದು ತಪ್ಪಾಗಿದೆ ಮಾನ್ಯ ಸದಸ್ಯರು ಸರಿ ಮಾಡಿಕೊಳ್ಳುವುದು.

ಶ್ರೀ ಎಲ್ ಟಿ. ತಿಮ್ಮಪ್ಪ ಹೆಗ್ಗಡೆ.—ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದವರು ಲಕ್ಷಗಟ್ಟಲೆ ಹಣ ವಂತಿಗೆ ಸಂಗ್ರಹಿಸುವುದಿಲ್ಲ ಎಂದು ತಪ್ಪು ಉತ್ತರದಲ್ಲಿ ಹೇಳಿದ್ದೀರಿ. ಹಾಗಾದರೆ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಏನು ನಾರಂಸ್ ಹಾಕಿಕೊಂಡಿದೆ?

ಶ್ರೀ ಎ. ಬಿ. ಜಕನೂರು.—ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯಕ್ಕೆ ಸರ್ಕಾರದಿಂದ ಹಣ ವನ್ನು ಮಂಜೂರು ಮಾಡಿದ್ದಾರೆ. ಆದರೆ ಬಿಲ್ಡಿಂಗ್ ಇನ್ನೂ ಸಿಕ್ಕಿಲ್ಲ. ಬಿಲ್ಡಿಂಗ್ ಸಿಕ್ಕಿದ ಮೇಲೆ ಶುರು ಮಾಡುತ್ತೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಬಿಲ್ಡಿಂಗ್ ಕಟ್ಟುವುದಕ್ಕೂ ಸರಕಾರ ಮಂಜೂರಾತಿಯನ್ನು ಕೊಟ್ಟಿದೆಯೇ ಕೊಟ್ಟಿದ್ದರೆ ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಎ. ಬಿ. ಜಕನೂರು.—ಒಂದು ಡಿಸ್‌ಪನ್ಸರಿಗೆ ಬಿಲ್ಡಿಂಗ್ ಬೇಕೆಂದು ನಾವು ಈಗಾಗಲೇ ಜಿಲ್ಲಾ ಧಿಕಾರಿಗಳಿಗೆ ತಿಳಿಸಿದ್ದೇವೆ. ಆದಷ್ಟು ಬೇಗನೇ ಶುರು ಮಾಡುತ್ತೇವೆ.

Financial Assistance for the improvement of Slums in Hassan Town.

443 SRI K. H. HANUME GOWDA (Hassan).—Will the Minister for Housing & Urban Development be pleased to state.—

(a) the number of slums in Hassan Town; furnish details;

(b) the names of slums to which and the quantum of financial assistance provided by the Slum Clearance Board for its improvement (particulars for the last five years may be given)?

SRI DHARAM SINGH (Minister for Housing & Urban Development)..

(a) The following 9 slums have been identified in Hassan Town.

1. Huts near Beeranahalli Tank, Silver Jubilee Park Road.
2. Bikkanalu Slum area at Pension Mohalla.
3. Slums of Scheduled Castes in Pension Mohal' & in Cobblers Colony.

4. Chippinakatte behind Municipal Slaughter house and civic Labourers Colony.
5. Slum behind Electricity Colony.
6. Slum of Scheduled Castes Colony at B. M. Road.
7. Slum behind District Lockup.
8. Slum near H. N. Pura Toll-gate.
9. Rangoli Halla Slum.

(b) No amount has been sanctioned to any specific slum for its improvement by this Board. (The Karnataka Slum Clearance Board) But, a total sum of Rs. 8 lakhs and 50 thousand only has been given to the Hassan Municipality as financial aid for the improvement of slums.

Details are as follows.—

Year	Amount sanctioned (Rs. in lakhs)	
1977-78	...	
1978-79	Rs. 1.00	(One lakh)
1979-80	Rs. 1.50	(One lakh fifty thousand)
1980-81	Rs. 4.00	(Four lakhs)
1981-82	Rs. 2.00	(Two lakhs)
Total	Rs. 8 50	lakhs only

(Rupees Eight Lakhs and Fifty Thousand only).

ಶ್ರೀ ಕೆ. ಹೆಚ್. ಹನುಮೇಗೌಡ —ಹಾಸನದಲ್ಲಿ ಕೊಳಚೇ ಪ್ರದೇಶಗಳ ಅಭಿವೃದ್ಧಿಗೋಸ್ಕರ ಸರ್ಕಾರದವರು ೪ ವರ್ಷಗಳಿಂದ ಸುಮಾರು ಎಂಟು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದೆ ಎಂದು ತಾವು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ ಇದರಲ್ಲಿ ಯಾವ ಯಾವ ಕೊಳಚೆ ಪ್ರದೇಶಗಳ ಅಭಿವೃದ್ಧಿಗೋಸ್ಕರ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ?

ಶ್ರೀ ಧರ್ಮಸಿಂಗ್.—ಎಲ್ಲಾ ಕೊಳಚೆ ಪ್ರದೇಶಗಳಿಗೂ ಸೇರಿಸಿ ಎಂಟು ಲಕ್ಷ ಐವತ್ತು ಸಾವಿರ ರೂ. ಕೊಟ್ಟಿದ್ದೇವೆ. ಪ್ರತ್ಯೇಕವಾಗಿ ಕೊಟ್ಟಿಲ್ಲ. ಮುನಿಸಿಪಾಲಿಟಿಗಳ ಮುಖಾಂತರ ೯ ಕೊಳಚೆ ಪ್ರದೇಶಗಳಿಗೆ ಸ್ಲಮ್ಸ್ ಇಂಪ್ರೂವ್‌ಮೆಂಟ್ ಸ್ಕೀಮ್‌ನಲ್ಲಿ ಕೊಟ್ಟಿದ್ದೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—೯ ಕೊಳಚೆ ಪ್ರದೇಶಗಳಿಗೆ ಎಂಟು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದರಲ್ಲಿ ಸರ್ಕಾರದಿಂದ ಒಂದೊಂದು ಮುನಿಸಿಪಾಲಿಟಿಗೆ ಕೊಳಚೆ ಪ್ರದೇಶದ ಅಭಿವೃದ್ಧಿಗೋಸ್ಕರ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ?

ಶ್ರೀ ಧರ್ಮಸಿಂಗ್.—೯ ಕೊಳಚೆ ಪ್ರದೇಶಗಳಲ್ಲಿ ಮುನಿಸಿಪಾಲಿಟಿಗಳವರು ಕೆಲಸವನ್ನು ತೆಗೆದು ಕೊಂಡಿದ್ದಾರೆ. ಇದನ್ನು ನಾನು ಕೂಡ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಸುಮಾರು ೫,೫೧೩ ಸಂಸಾರಗಳು ಇವೆ. ಅವರಿಗೆ ಎಂಟು ಲಕ್ಷ ಐವತ್ತು ಸಾವಿರ ರೂಪಾಯಿಗಳ ಹಣವನ್ನು ಅಭಿವೃದ್ಧಿಗೋಸ್ಕರವಾಗಿ ಕೊಟ್ಟಿದ್ದೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—೯ ಕೊಳಚೆ ಪ್ರದೇಶಗಳಿವೆ ಎಂದು ಸರ್ಕಾರ ಗುರುತಿಸಿದೆಯಲ್ಲ ಆ ಎಲ್ಲ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ನಾಗರೀಕ ಅನುಕೂಲಗಳನ್ನು ಕಲ್ಪಿಸಬೇಕಾದರೆ ಒಟ್ಟು ಎಷ್ಟು ಹಣ ಖರ್ಚು ಮಾಡಬೇಕಾಗುತ್ತದೆ?

ಶ್ರೀ ಧರ್ಮಸಿಂಗ್.—೯ ಕೊಳಚೆ ಪ್ರದೇಶಗಳಲ್ಲಿ ೫೩೧೫ ಜನರಿದ್ದಾರೆ. ಅವರಿಗೋಸ್ಕರ ಈಗಾಗಲೇ ೨೧ ಲಕ್ಷ ರೂಪಾಯಿಗಳಲ್ಲಿ ೩೨೨ ಮನೆಗಳನ್ನು ಕಟ್ಟಿಸತಕ್ಕ ಒಂದು ಯೋಜನೆಯನ್ನು ತಯಾರು ಮಾಡ ಲಾಗಿದ್ದು ಅದಕ್ಕೆ ಮಂಜೂರಾತಿ ಕೂಡ ದೊರೆತು ಅಡಿಗಲ್ಲನ್ನು ಸಹ ಹಾಕಿದ್ದೇವೆ. ಎಸ್ಟಿಮೇಟ್ ಕೂಡ ಸ್ಯಾಂಕ್ಷನ್ ಆಗಿದೆ. ಮತ್ತು ಆ ಪ್ರಕಾರ ಕೆಲಸ ಮಾಡಲು ಸೂಚನೆಗಳನ್ನು ಕೊಟ್ಟಿದ್ದೇವಲ್ಲದೆ ಇತರ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದೇವೆ. ಅಷ್ಟೇ ಅಲ್ಲದೆ, ಮುನಿಸಿಪಾಲಿಟಿಯವರು ಜಮೀನು ಒದಗಿಸಿ ಕೊಟ್ಟರೆ ಸಣ್ಣ ಸಣ್ಣ ಮನೆಗಳನ್ನು ಸಹ ಕಟ್ಟಿಸಿ ಕೊಡುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಜಿಲ್ಲಾ ಬಂದೀಖಾನೆಯ ಹಿಂಭಾಗದಲ್ಲಿ ಕೊಳಚೆ ಪ್ರದೇಶ ಇದೆ ಎಂದು ಹೇಳಿದ್ದೀರಿ ಅದು ದನಗಳ ಜಾತ್ರೆ ನಡೆಯತಕ್ಕ ಪ್ರದೇಶ. ಆ ಪ್ರದೇಶದಲ್ಲಿ ಕೊಳಚೆ ಪ್ರದೇಶ ಬಂದಿರುವುದರಿಂದ ದನಗಳ ಜಾತ್ರೆಗೆ ಜಾಗ ಇಲ್ಲದೆ ಅನಾನುಕೂಲವಾಗಿದೆ. ಆದ್ದರಿಂದ ಅದನ್ನು ಸ್ಥಳಾಂತರಿ ಸುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ? ಎಷ್ಟು ದಿನಗಳಲ್ಲಿ ಸ್ಥಳಾಂತರಿಸುತ್ತೀರಿ?

ಶ್ರೀ ಧರ್ಮಸಿಂಗ್.—ಆ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಎಲ್ಲ ಕೊಳಚೆ ಪ್ರದೇಶಗಳಲ್ಲಿರ ತಕ್ಕ ಜನಗಳಿಗೂ ಒಂದೇ ಕಡೆ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡುವ ಸಲುವಾಗಿ ೫ ಎಕರೆ ಜಮೀನನ್ನು ತೆಗೆದುಕೊಂಡು ಅದರಲ್ಲಿ ಸುಮಾರು ೩೦೦ ಮನೆಗಳನ್ನು ಕಟ್ಟಿಸುತ್ತಿದ್ದೇವೆ. ಆ ಮನೆಗಳು ನಿರ್ಮಾಣ ಗೊಳ್ಳುತ್ತಿದ್ದಂತೆಯೇ ಅಲ್ಲಿಗೆ ಎಲ್ಲ ಕೊಳಚೆ ನಿವಾಸಿಗಳನ್ನು ಸ್ಥಳಾಂತರಿಸುತ್ತೇವೆ.

Land grante to Start Poultry Farm in Kollegal.

475 SRI G. RAJUGOWDA (Hanur).—Will the Minister for Revenue be pleased to state.—

(a) the person to whom, when and the extent of Government land was granted to start poultry farm in Kollegal;

(b) the conditions laid down at the time of grant;

(c) whether the Government would take action to rescind the sanction order, if the terms of grant has been violated?

SRI M. MALLIKARJUNA KHARGE (Minister for Revenue).—

(a) The Government land to the extent of 55 cents has been sanctioned to Shri C. S. Balakrishne Gowda, Ex-MLC for construction of a dwelling house and to start poultry Farm at survey No. 708 B1, A-1, A-2 and 707 A, A2 of Kollegal in terms of Government Order No. RD 328 GCF 65, dated 5-5-1966 and possession of the said land was given to him on 23-8-1966.

(b) The terms laid down in the Land grant order was that the grantee has to erect necessary buildings within a period of 12 months from the date of taking possession of the land and to utilise the land for the purpose to which it was intended.

(c) It was brought to the notice of Government, that the terms of Land Grant was violated and a showcause notice was issued to the grantee calling for explanation before rescinding the land grant order. After considering the replies furnished by the grantee for the show cause notice, Government have extented the time-limit upto